# ಹಿರಿಯ ಸಿವಿಲ್ ಜಡ್ಜ ಹಾಗೂ ಪ್ರಧಾನ ಜೆಎಂಎಫಸಿ  ನ್ಯಾಯಾಲಯ, ಶಿರಸಿ

ಎಮ್.ವಿ.ಸಿ.ನಂ.119-2020 ಕ್ಲಬ್ ವಿತ್  118-2020

ಆರ್.ಡಬ್ಲ್ಯೂ-2

| | | |
|---|---|---|
| ಸಾಕ್ಷಿದಾರರ ಹೆಸರು | - | ಎನ್. ವಿನಯಕುಮಾರ್ |
| ತಂದೆಯ  ಹೆಸರು | - | ನಂಜುಂಡಸ್ವಾಮಿ |
| ವಯಸ್ಸು | - | 30 ವರ್ಷ |
| ಉದ್ಯೋಗ | - | ಪ್ರ.ದ.ಸ. |
| ವಾಸ್ತವ್ಯ | - | ಸಾಗರ |

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ  30-06-2025**

**ಮುಖ್ಯ ವಿಚಾರಣೆ – ಎದ್ರುದಾರರ ಪರವಾಗಿ ಶ್ರೀ ಆರ್ .ಕೆ. ಹೆಚ್.  ವಕೀಲರಿಂದ**

ನಾನು ಸಾಗರ ಆರ್.ಟಿ.ಒ. ಕಚೇರಿಯಲ್ಲಿ ಕಳೆದ 10 ವರ್ಷಗಳಿಂದ ಪ್ರ.ದ.ಸ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಸಾಕ್ಷಿ ಹೇಳಲು ಅಧಿಕಾರ ಪತ್ರವನ್ನು ನೀಡಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್.3 ಎಂದು ಗುರುತಿಸಲಾಯಿತು.. ಆರ್ .ಸಿ ಎಕ್ಸಟ್ರಾಕ್ಟನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್. 4 ಎಂದು ಗುರುತಿಸಲಾಯಿತು. ಡಿ. ಎಲ್ . ನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್. 5 ಎಂದು ಗುರುತಿಸಲಾಯಿತು.  ವಾಹನ ಸಂಖ್ಯೆಃ ಕೆ. ಎ. 15 ಎ. 0025 ವಾಹನಕ್ಕೆ  ದಿನಾಂಕಃ 25-01-2019 ರಂದು ಅಪಘಾತದ ದಿನ  ಆರ್ . ಸಿ.  ಮತ್ತು ಎಫ್ . ಸಿ. ಊರ್ಜಿತದಲ್ಲಿತ್ತು. ವಾಹನದ ಚಾಲಕ ರಾಜು  ಕೆರಿಯಪ್ಪಾ ಎನ್ನುವವರು ದಿನಾಂಕಃ 25-11-2019 ರಂದು ಎಲ್ . ಎಂ. ವಿ. ಲೈಸನ್ಸನ್ನು ಪಡೆದುಕೊಂಡಿದ್ದಾರೆ. ರಾಜು ಕೆರಿಯಪ್ಪಾ ಎನ್ನುವವರಿಗೆ ದಿನಾಂಕಃ 25-11-2019 ರಂದು ಅಪಘಾತವಾದ ದಿನ ವಾಹನ ಸಂಖ್ಯೆಃ ಕೆ.ಎ. 15 ಎ 0025 ವಾಹನ ಚಲಾಯಿಸಲು ಸೂಕ್ತವಾದ ಚಾಲನಾ ಪರವಾನಿಗೆ Yellow  ಬೋರ್ಡ ಆಗಿದ್ದರಿಂದ ಇರಲಿಲ್ಲ.

**ಪಾಟೀ ಸವಾಲು ಃ ಅರ್ಜಿದಾರರ ಪರವಾಗಿ ಶ್ರೀ ಎ. ವಿ. ಹೆಚ್ ವಕೀಲರಿಂದಃ**

ವಾಹನ ಸಂಖ್ಯೆಃ ಕೆ.ಎ. 15 ಎ 0025 ವಾಹನವು ತ್ರಿಚಕ್ರವಾಹನವಾಗಿರುತ್ತದೆ. ರಾಜು ಕೆರಿಯಪ್ಪಾ ಎನ್ನುವವರಿಗೆ ತ್ರಿಚಕ್ರ ವಾಹನ ಚಲಾಯಿಸಲು ಪರವಾನಿಗೆ ಇರಲಿಲ್ಲ. ನಿಶಾನೆ ಆರ್. 5 ರಲ್ಲಿ ದಿನಾಂಕಃ 28-10-2013 ರಿಂದ 27-10-2033 ರ ವರೆಗೆ non transport ವಾಹನ ಚಲಾಯಿಸಲು ಪರವಾನಿಗೆ ಇತ್ತು. ಸದ್ರಿ ಅವಧಿಯಲ್ಲಿ ತ್ರಿಚಕ್ರ ವಾಹನ ಚಲಾಯಿಸಲು ಪರವಾನಿಗೆ ಇತ್ತು. ಸದ್ರಿ ವಾಹನದ ಇಂಜಿನ್ ಮತ್ತು ಮೆಕಾನಿಸಂ ಒಂದೇ ತರ ಇರುತ್ತದೆ ಎಂದರೆ ಸರಿ. ಟ್ರಾನ್ಸಪೋರ್ಟ ಮತ್ತು non transport ಚಾಲನೆಯ ಸಾಮರ್ಥ್ಯ ಮತ್ತು ಅನುಭವ ವ್ಯತ್ಯಾಸವಾಗಿರುತ್ತದೆ. ರಾಜು ಕೆರಿಯಪ್ಪಾ ಎನ್ನುವವರಿಗೆ ಸೂಕ್ತ ಚಾಲನಾ ಪರವಾನಿಗೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಮರುವಿಚಾರಣೆ ಎದ್ರುದಾರರ ಪರ ಶ್ರೀ ಆರ್. ಕೆ. ಹೆಚ್ ವಕೀಲರಿಂದಃ**

ದಿನಾಂಕಃ 28-10-2013 ರಿಂದ 27-10-2033 ರ ವರೆಗೆ ಕಾಣಿಸಿದ ಅವಧಿಯಲ್ಲಿ ತ್ರಿ ವೀಲರ್ ಅಪಘಾತಕ್ಕೆ ಈಡಾದ ವಾಹನಕ್ಕೆ non transport ಕಾಣಿಸಿಲ್ಲಾ ಎಂದರೆ ಸರಿ. ಅಪಘಾತಕ್ಕೆ ಈಡಾದ ವಾಹನವು ಟ್ರಾನ್ಸಪೂರ್ಟ ವಾಹನ ಆದ್ದರಿಂದ ಡಿ.ಎಲ್ ಊರ್ಜಿತದಲ್ಲಿ ಇರಲಿಲ್ಲ. ಸದ್ರಿ ಅಪಘಾತದ ದಿನಂದು ಮೇಲೆ ಹೇಳಿದ ವಾಹನ yellow ಬೋರ್ಡ ಆಗಿತ್ತು.

**ಮುಂದುವರೆಗದ ಪಾಟೀ ಸವಾಲು ಃ ಅರ್ಜಿದಾರರ ಪರವಾಗಿ ಶ್ರೀ ಎ. ವಿ. ಹೆಚ್ ವಕೀಲರಿಂದಃ**

ರಾಜು ಕೆರಿಯಪ್ಪಾ ಎನ್ನುವವರಿಗೆ ತ್ರಿಚಕ್ರ ವಾಹನ ಸ್ವಂತಕ್ಕೆ ಚಲಾಯಿಸಲು ಅಧಿಕಾರ ಇದೆ ಎಂದರೆ ಸರಿ.

( ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

ಪ್ರಧಾನ ಜೆ.ಎಂ.ಎಫ್.ಸಿ, ಶಿರಸಿ.